ಅ.ದಾ. ನಂ. 277/22 ಡಿ .ಡಬ್ಲ್ಯೂ-1

ದಿನಾಂಕಃ 16.06.2026 ರಂದು ಡಿ.ಡಬ್ಲ್ಯೂ-1 ರವರನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲುಃ ವಾದಿ ಪರ ವಕೀಲರಿಂದಃ**

1. ವಾದಿ ಏನು ಪರಿಹಾರ ಕೋರಿರುತ್ತಾರೆ ಎಂದರೆ ಜಾಗ ನಮ್ಮದು ನಮ್ಮ ಜಮೀನಿಗೆ ಬಂದು ತೊಂದರೆ ಕೊಡುತ್ತಿದ್ದಾರೆ ಎಂದು. ದಾವಾ ಸ್ವತ್ತಿನ ಸ.ನಂ.93/2. 2 ಎಕರೆ 38 ಗುಂಟೆ. ದಾವಾ ಸ್ವತ್ತಿನ ಚೆಕ್ಕುಬಂದಿ ಏನು ಎಂದರೆ ಪೂ-ಸ.ನಂ.95 ರತ್ನಮ್ಮ ಅವರ ಕುಟುಂಬದವರು ಸದರಿ ರತ್ನಮ್ಮರವರು ವಾದಿಯ ಅತ್ತೆ. ದರ್ಶನ್ ವಾದಿಯ ತಮ್ಮ. ಪ-ಸ.ನಂ.93 ಮುದ್ದೇಗೌಡರ ಮಕ್ಕಳು. ಉ-ನನ್ನ ಬಾಬ್ತು ಸ.ನಂ.123. ದ-ಮುದ್ದೇಗೌಡರ ಜಮೀನು. ದಾವಾ ಸ್ವತ್ತಿನ ಪೂರ್ವಕ್ಕೆ ದರ್ಶನ್ ರವರ ಸ್ವತ್ತು ಎಂದರೆ ಸರಿಯಲ್ಲ. ದಕ್ಷಿಣಕ್ಕೆ ಪ್ರಕಾಶ್ ರವರ ಜಮೀನು ಎಂದರೆ ನನಗೆ ಗೊತ್ತಿಲ್ಲ. ಉತ್ತರಕ್ಕೆ ದಿವಾಕರರವರ ಜಮೀನು ಎಂದರೆ ಸರಿಯಲ್ಲ. ದಕ್ಷಿಣಕ್ಕೆ ಸಂತೋಷ್ ರವರ ಜಮೀನು ಎಂದರೆ ಸರಿಯಲ್ಲ. ದಾವಾ ಸ್ವತ್ತಿನ ಚೆಕ್ಕುಬಂದಿ ನಾನು ತಿಳಿದುಕೊಂಡಿರುವುದಿಲ್ಲ ಎಂದರೆ ಸರಿಯಲ್ಲ.

2. ದಾವಾ ಸ್ವತ್ತು ವಾದಿಗೆ ಹೇಗೆ ಬಂದಿರುತ್ತದೆ ಎಂದರೆ ಹಿಸ್ಸೆ ಮುಖಾಂತರ. ದಾವಾ ಸ್ವತ್ತಿನಲ್ಲಿ ವಾದಿ ಏನೇನು ಬೆಳೆದಿರುತ್ತಾರೆ ಎಂದರೆ ಕಾಫಿ ಅಡಿಕೆ ಮತ್ತು ಮಿಶ್ರಿತ ಬೆಳೆ ಹಾಗೂ ಪಾಳು ಬಿದ್ದಿರುತ್ತದೆ. ಅದರಲ್ಲಿ 30 ಬೀಟೆ ಮರ, 30 ಹೊನ್ನೆ ಮರ, 40 ನಂದಿ, 30 ಹಲಸಿನ ಮರ ಎಂದರೆ ಸರಿಯಲ್ಲ. ಮರಗಳಿರುವುದಿಲ್ಲ. ಮರಗಳನ್ನು ಬೆಳೆದಿರುವ ಜಾಗವನ್ನು ಹೊರತುಪಡಿಸಿ ಉಳಿದ ಜಾಗವನ್ನು ಸ್ವಚ್ಛಗೊಳಿಸುತ್ತಿದ್ದಾರೆ ಎಂದರೆ ಸರಿಯಲ್ಲ. ವಾದಿ ಯಾವ ಕಾಫಿ ಬೆಳೆಯನ್ನು ಬೆಳೆದಿರುತ್ತಾರೆ ಎಂದರೆ ಗೊತ್ತಿಲ್ಲ. ವಾದಿ ಸಲ್ಲಿಸಿರುವ ದಾಖಲಾತಿಗಳ ಬಗ್ಗೆ ಮಾಹಿತಿ ಇರುವುದಿಲ್ಲ.

3. ನಿಪಿ 1 ವಾದಿ ಹೆಸರಿನಲ್ಲಿರುವ ಪಹಣಿ ಎಂದರೆ ಸರಿ. ವಾದಿ ಹೆಸರಿನಲ್ಲಿರುವ

2 ಎಕರೆ 38 ಗುಂಟೆಯ ಮೇಲೆ ನನಗೆ ಯಾವುದೇ ಅಧಿಕಾರ ಇರುವುದಿಲ್ಲ ಎಂದರೆ ಸರಿ. ನಿಪಿ 2 ದಾವಾ ಸ್ವತ್ತಿನ ಮ್ಯುಟೇಷನ್ ಎಂದರೆ ಸರಿ. ನಿಪಿ 4 ಯಾವ ಸರ್ವೆ ನಂ.ಗೆ ಸೇರಿದ ನಕಾಶೆ ಎಂದರೆ 93/2. ನಿಪಿ 4 ರಲ್ಲಿ ಕಾಣಿಸುತ್ತಿರುವ 2ನೇ ನಂ.ನ ಸ್ವತ್ತು ವಾದಿಯ ಸ್ವತ್ತು ಎಂದರೆ ಸರಿ. ನಿಪಿ 4 ರಲ್ಲಿ ಗಾಡಿದಾರಿ ಅಥವಾ ಬಂಡಿದಾರಿ ತೋರಿಸಿರುತ್ತಾರ ಎಂದರೆ ನಕಾಶೆಯಲ್ಲಿರುವುದಿಲ್ಲ ಆದರೆ ವಾಸ್ತವದಲ್ಲಿ ಇರುತ್ತದೆ. ನಿಪಿ 5 ಗ್ರಾಮ ನಕಾಶೆ ಎಂದರೆ ಸರಿ. ನಿಪಿ 5 ರಲ್ಲಿ ಸ.ನಂ.93 ರ ಯಾವ ಭಾಗದಲ್ಲೂ ರಸ್ತೆ ಇರುವುದಿಲ್ಲ ಎಂದರೆ ನಕಾಶೆಯಲ್ಲಿರುವುದಿಲ್ಲ ಒಟ್ಟು ಕುಟುಂಬದ ಆಸ್ತಿಯಲ್ಲಿ ನಾನು 3 ಎಕರೆಯನ್ನು ಖರೀದಿಸಿರುತ್ತೇನೆ. ಅದರಲ್ಲಿ ರಸ್ತೆ ಇರುತ್ತದೆ. ಸ.ನಂ.93 ರ ಸುತ್ತ ನನ್ನ ಸ್ವತ್ತಿರುವುದಿಲ್ಲ ಎಂದರೆ ಸರಿಯಲ್ಲ. ಸ.ನಂ. 94, 97 ಇರುತ್ತದೆ. ನಿಪಿ 5 ರಲ್ಲಿ ಸ.ನಂ.93 ರ ಉತ್ತರಕ್ಕೆ ಸ.ನಂ.123 ಕಾಣಿಸುತ್ತಿಲ್ಲ ಎಂದರೆ ನಕಾಶೆಯಲ್ಲಿ ಕಾಣಿಸುತ್ತಿಲ್ಲ. ನಿಪಿ 5 ರಲ್ಲಿ ಸ.ನಂ.93 ರ ಪೂರ್ವಕ್ಕೆ ಸ.ನಂ.95 ಇದೆ ಎಂದರೆ ಸರಿ. ಸಾಕ್ಷಿ ಮುಂದುವರೆದು ಸ.ನಂ.95 ರಲ್ಲಿ ರಸ್ತೆ ಇರುತ್ತದೆ ಎಂದು ನುಡಿಯುತ್ತಾರೆ. ದಾವಾ ಸ್ವತ್ತಿನ ಸುತ್ತ ಯಾವುದೇ ರಸ್ತೆ ಇರುವುದಿಲ್ಲ ಎಂದರೆ ಸರಿಯಲ್ಲ. ರಸ್ತೆ ಇದೆ ಎಂದು ತೋರಿಸಲು ಯಾವ ದಾಖಲಾತಿ ಹಾಜರುಪಡಿಸಿದ್ದೀರ ಎಂದರೆ ಪಹಣಿ ಮತ್ತು ಎ.ಡಿ.ಎಲ್.ಆರ್. ಆದೇಶ. ನಿಡಿ 1 ಮತ್ತು 2 ರಲ್ಲಿ ರಸ್ತೆ ಕಾಣಿಸುತ್ತಿಲ್ಲ ಎಂದರೆ ಸರಿ. ಸ.ನಂ.97/1 ಮತ್ತು 94/2 ರ ನಕಾಶೆಯನ್ನು ಹಾಜರುಪಡಿಸಿದ್ದೀರ ಎಂದರೆ ಇಲ್ಲ.

4. ನಿಡಿ 3 ರ ಆದೇಶ ಸ.ನಂ.93/2 ಕ್ಕೆ ಸಂಬಂಧಪಟ್ಟಿದ್ದಲ್ಲ ಎಂದರೆ ಸರಿಯಲ್ಲ. ನಿಡಿ 3 ರ ಪ್ರಕರಣದಲ್ಲಿ ಸ.ನಂ.99 ರಲ್ಲಿ ಹೊಸದಾಗಿ 123 ಎಂದು ದುರಸ್ತಿಯಾಗಿರುವ ದಾಖಲಾತಿಯನ್ನು ರದ್ದುಪಡಿಸಲು ಹೂಡಿರುವ ಪ್ರಕರಣ ಎಂದರೆ ಸರಿ. ಸಾಕ್ಷಿ ನಿಡಿ 3 ನ್ನು ಓದಿ ಅದರಲ್ಲಿ ಸ.ನಂ.93/2 ರ ಉತ್ತರ ದಿಕ್ಕಿಗೆ ರಸ್ತೆ ಇರುತ್ತದೆ ಎಂದು ನಮೂದಿಸಿರುತ್ತಾರೆ ಎಂದು ನುಡಿಯುತ್ತಾರೆ. ನಿಡಿ 3 ಹೊಸದಾಗಿ ದುರಸ್ತಿಯಾಗಿರುವ ಸ.ನಂ.123 ರದ್ದಾಗಿರುವ ಆದೇಶ ಎಂದರೆ ಸರಿ. ಸದರಿ ಆದೇಶಕ್ಕೂ ದಾವಾ ಸ್ವತ್ತಿಗೂ ಸಂಬಂಧ ಇರುವುದಿಲ್ಲ ಎಂದರೆ ಸರಿಯಲ್ಲ.

5. ದಾವಾ ಹೂಡುವ ಒಂದು ವಾರದ ಪೂರ್ವದಲ್ಲಿ ವಾದಿ ಹಸನು ಮಾಡಿರುವ ಜಾಗದಲ್ಲಿ ರಸ್ತೆ ಮಾಡಲು ಅತಿಕ್ರಮ ಪ್ರವೇಶಿಸಲು ಪ್ರಯತ್ನಿಸಿರುತ್ತೇನೆ ಎಂದರೆ ಸರಿಯಲ್ಲ. ಆದ ಕಾರಣ ವಾದಿ ದಾವೆ ಸಲ್ಲಿಸಿರುತ್ತಾರೆ ಎಂದರೆ ಸರಿಯಲ್ಲ. ದಾವಾ ಸ್ವತ್ತಿನ ವಾದಿಯ ಸ್ವಾಧೀನಕ್ಕೆ ಅಡಚಣೆ ಪಡಿಸಲು ನನಗೆ ಯಾವುದೇ ಅಧಿಕಾರ ಇರುವುದಿಲ್ಲ ಎಂದರೆ ಪೂರ್ವಕ್ಕೆ ನನಗೆ ರಸ್ತೆ ಬೇಕು ಎಂದು ನುಡಿಯುತ್ತಾರೆ. ಸದರಿ ರಸ್ತೆಯ ವಿಚಾರವಾಗಿ ವಾದಿಗೆ ತೊಂದರೆ ಕೊಡುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಿರುತ್ತೇನೆ.)

ಓದಿ ಹೇಳಿ ಕೇಳಿ ಸರಿ ಇದೆ ಎಂದು ಒಪ್ಪಿರುತ್ತಾರೆ.

(ಸ್ನೇಹ ಎಂ.)
ವ್ಯವಹಾರ ನ್ಯಾಯಾಧೀಶರು,
ಮತ್ತು ಜೆ.ಎಂ.ಎಫ್.ಸಿ., ಆಲೂರು.